<u>ಮಧ್ಯಂತರ ಅರ್ಜಿ-1ರ ಮೇಲೆ ಆದೇಶ</u>

ಮೇಲ್ಮನವಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಆಜ್ಞೆ-41 ನಿಯಮ 5 ಕಲಂ.151 ಸಿವಿಲ್ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಮಧ್ಯಂತರ ಅರ್ಜಿ 1ನ್ನು ಸಲ್ಲಿಸಿ ವಿಚಾರಣಾ ನ್ಯಾಯಾಲಯ ಅಸಲು ದಾವಾ ನಂ.16/19 ರಲ್ಲಿ ದಿ.26-09-2024 ರಂದು ಮಾಡಿದಂತಹ ತೀರ್ಪು ಮತ್ತು ಡಿಕ್ರಿಯನ್ನು ತಡೆಹಿಡಿಯಬೇಕೆಂದು ವಿನಂತಿಸಿ ಕೊಂಡಿರುತ್ತಾರೆ.

ಅರ್ಜಿ, ಪ್ರಮಾಣಪತ್ರ ಪರಿಶೀಲಿಸಲಾಗಿ ವಿಚಾರಣಾ ನ್ಯಾಯಾಲಯವು ಡಿಕ್ರಿಯಾಗಿ ಮೂರು ತಿಂಗಳೊಳಗಾಗಿ ಮೇಲ್ಮನವಿದಾರರು ಎದುರುದಾರರಿಗೆ ದಾವಾ ಆಸ್ತಿಯ ಸ್ವಾಧೀನವನ್ನು ಬಿಟ್ಟುಕೊಡಬೇಕೆಂದು ಡಿಕ್ರಿ ಮಾಡಲಾಗಿದ್ದು , ಮೇಲ್ಮನವಿಯಲ್ಲಿರುವ ಕಾರಣಗಳನ್ನು ಪರಿಶೀಲಿಸಲಾಗಿ , ಈ ಹಂತದಲ್ಲಿ ನ್ಯಾಯಾಲಯವು ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪಿಗೆ ತಡೆಯಾಜ್ಞೆ ನೀಡದೆಯಿದ್ದಲ್ಲಿ ಮೇಲ್ಮನವಿದಾರರಿಗೆ ತೊಂದರೆಯುಂಟಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ಕೆಳಗಿನಂತೆ

**ಆದೇಶ**

ಮುಂದಿನ ದಿನಾಂಕದವರೆಗೆ ವಿಚಾರಣಾ ನ್ಯಾಯಾವು ಅಸಲು ದಾವಾ ನಂ.16/19, ದಿ.26-09-2024 ರಂದು ನೀಡಿದ ತೀರ್ಪು ಮತ್ತು ಡಿಕ್ರಿಯನ್ನು ತಡೆಹಿಡಿಯಲು ಆದೇಶಿಸಲಾಯಿತು.

ಎದುರುದಾರರಿಗೆ ಮೇಲ್ಮನವಿ ನೋಟೀಸು, ಮಧ್ಯಂತರ ಅರ್ಜಿ-1 ರ ಮೇಲೆ ನೋಟೀಸು ಮತ್ತು ತಾತ್ಕಾಲಿಕ ಆದೇಶವನ್ನು ಕಳುಹಿಸಲು ಆದೇಶಿಸಲಾಯಿತು.

ವಿಚಾರಣಾ ನ್ಯಾಯಾಲಯದಿಂದ ದಾವೆಯ ಕಡತವನ್ನು ತರಿಸಿಕೊಳ್ಳಲು ಆದೇಶಿಸಲಾಯಿತು.

ಮುಂದಿನ ದಿನಾಂಕ 28-01-2025

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು , ದಾವಣಗೆರೆ